ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಅದು ದಯಮಾಡಿ ಕಡತಕ್ಕೆ ಹೋಗುವುದು ಬೇಡ.

ಅಧ್ಯಕ್ಷರು: ಬೇಡವಾ; ಆಯಿತು; ಅದು ಏನು, ಬೇಗ ಪ್ರಶ್ನೆ ಕೇಳಿ.

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಕೇಳುತ್ತಿದ್ದೇನೆ. ಇವರು ಸೇರಿದವರನ್ನೇ ಬಿಡಿಸಿಕೊಂಡು ಬಂದಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ತಾವು ಕಡತದಿಂದ ತೆಗೆಸಬೇಕು.

ಅಧ್ಯಕ್ಷರು: ಆಯಿತು, ಅದನ್ನು ತೆಗೆಸೋಣ, ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಬಿಜಾಪುರದ್ದು ಆದ್ಯತೆಯ ಕ್ಷೇತ್ರದಲ್ಲಿ ಇದು ಸೇರಿರಲಿಲ್ಲ. ಈಗಲೂ ಅದು ಸೇರಿಲ್ಲ, ಆದ್ಯತೆಯಲ್ಲಿ ಇದನ್ನು ತೆಗೆದುಕೊಳ್ಳುವ ಪ್ರಯತ್ನವನ್ನು ನಾನು ಮಾಡುತ್ತೇನೆ. ಒಂದು ನಿಯೋಗವು ಹೋಗಿ ಏರ್‌ಪೋರ್ಟ್ ಆಥಾರಿಟಿ ಆಫ್ ಇಂಡಿಯಾವನ್ನು ಮತ್ತು ಮಾನ್ಯ ಮಂತ್ರಿಯವರನ್ನು ಕಂಡು ಇದಕ್ಕೆ ಕ್ಲಿಯರೆನ್ಸ್ ತೆಗೆದುಕೊಳ್ಳುವಂತಹ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತೇನೆ, ಮತ್ತೆ ನಿಮ್ಮನ್ನೂ ಜೊತೆಗೆ ಕರೆದುಕೊಂಡು ಹೋಗುತ್ತೇನೆಂಬ ಮಾತನ್ನು ಹೇಳಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್: ತಾವು ಎಷ್ಟು ದಿನಗಳು ಎಂದು ಹೇಳಿಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಮೇ ತಿಂಗಳಲ್ಲಿ ಹೋಗೋಣವೆಂದು ಸ್ಪಷ್ಟವಾಗಿ ಹೇಳಿದ್ದೇನೆ. ಒಂದು ನಿಯೋಗವನ್ನು ಕರೆದುಕೊಂಡು ಹೋಗಿ ಬರೋಣವೆಂದು ಹೇಳಿದ್ದೇನೆ.

64(366) ಶ್ರೀ ಶ್ರೀರಾಮರೆಡ್ಡಿ ಜಿ.ವಿ (ಬಾಗೇಪಲ್ಲಿ): ಮಾನ್ಯ ಯೋಜನೆ, ಸಣ್ಣ ಉಳಿತಾಯ ಹಾಗೂ ವಿಜ್ಞಾನ ತಂತ್ರ ಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ವಾರ್ಷಿಕ ಅನುದಾನವನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಶ್ರೀ ರಾಮಚಂದ್ರ ಗೌಡ (ಕಂದಾಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ಹಣಕಾಸು ಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳಾಗಿರುವಂಥವರು ಸದನದಲ್ಲಿ ಕುಳಿತು ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದರು. ಈಗ ಮೊನ್ನೆ ಬಜೆಟ್‌ನಲ್ಲಿ 50 ಲಕ್ಷ ರೂಪಾಯಿಗಳನ್ನು ರಸ್ತೆ ಕಾಮಗಾರಿಗಳಿಗೆ ಎಂದು ಕೊಟ್ಟಿದ್ದಾರೆ. ಅಲ್ಲಿಗೆ ನಮಗೆ ಒಂದು ಕೋಟಿ ರೂಪಾಯಿಗಳು ಆಗುತ್ತದೆಂದು ಮಾನ್ಯ ಉಪ ಮುಖ್ಯಮಂತ್ರಿಯವರ ವಾದ. ಆದುದರಿಂದ

ನಾನು ಮಾನ್ಯ ಉಪ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ. ಒಂದು ಕಿ.ಮೀ. ಸರಿಯಾದಂತಹ ರಸ್ತೆಯನ್ನು ಇವತ್ತು ಮಾಡಬೇಕಾದರೆ, ಕನಿಷ್ಟ 12 ಲಕ್ಷ ರೂಪಾಯಿಗಳು ಬೇಕಾಗುತ್ತದೆ, ಅದು ವಿತ್ ಆಸ್‌ಫಾಲ್ಟ್. ನೀವು 50 ಲಕ್ಷ ರೂಪಾಯಿಗಳನ್ನು ರಸ್ತೆ ಹಾಗೂ ಇತರೇ ಕಾಮಗಾರಿಗಳಿಗೆ ಎಂದು ಸಪರೇಟ್ ಆಗಿ ಕೊಟ್ಟರೆ, 5 ಕಿ.ಮೀ. ರಸ್ತೆ ಕೂಡ ಅದರಲ್ಲಿ ಆಗುವುದಿಲ್ಲ. ನಾನು ಒಂದು ವರ್ಷದಲ್ಲಿ ಶಾಸಕರಾಗಿರುವವರು ನಮ್ಮ ಕ್ಷೇತ್ರದಲ್ಲಿ 5 ಕಿ.ಮೀ. ರಸ್ತೆಯನ್ನು ಮಾಡಿ ನಾನು ಬದುಕುವುದು ಹೇಗೆಂಬುದನ್ನು ದಯಮಾಡಿ ತಾವು ಆಲೋಚನೆಯನ್ನು ಮಾಡಿ. ಎರಡನೆಯದಾಗಿ ಹಿಂದೆ ಏನು 50 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದರು, ಆ 50 ಲಕ್ಷ ರೂಪಾಯಿಗಳು ಸೇರಿದರೂ ಕೂಡ, ಅದನ್ನು ಖರ್ಚು ಮಾಡಲು ನೀವು ಗೈಡ್‌ಲೈನ್ಸ್ ಅನ್ನು ಕೊಟ್ಟಿದ್ದೀರಿ. ಇಂಥಾದ್ದಕ್ಕೆ ಇಷ್ಟು ಖರ್ಚು ಮಾಡಬೇಕೆಂದು ತಿಳಿಸಿದ್ದಿರಿ. ನಾನು ಆ ಗೈಡ್‌ಲೈನ್ಸ್ ಪ್ರಕಾರ ಏನಾದರೂ ಖರ್ಚು ಮಾಡುವುದಕ್ಕೆ ಹೋದರೆ, ಒಂದು ಕಿ.ಮೀ. ರಸ್ತೆಯನ್ನು ಸರಿಯಾದಂತಹ ರೀತಿಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಹಳ್ಳಿಗಾಡಿನ ಪ್ರದೇಶದಲ್ಲಿ ಬಹಳ ಪ್ರಮುಖವಾಗಿ ಬೇಕಾಗಿರುವಂಥಾದ್ದು ರಸ್ತೆ, ಕುಡಿಯುವ ನೀರು ವಿಲೇಜ್‌ನೊಳಗೆ ಇರುವಂತಹ ರಸ್ತೆಗಳು, ಸಮುದಾಯ ಭವನಗಳು, ನೈರ್ಮಲ್ಯ, ಮೊದಲು ಸಿ.ಎಂ. ಜಿವೈ ಮೊದಲು ಇತ್ತು. Z.P ಅದನ್ನು ಟ್ರಾನ್ಸ್‌ಫರ್ ಮಾಡಿ ಬಿಚ್ಚಿದ್ದೀರಿ. ಈಗ Z.P ಯವರು ನಮ್ಮ ಯೋಜನೆಗಳನ್ನು ಅದರಲ್ಲಿ ಸೇರಿಸುವುದಿಲ್ಲ. ನಮ್ಮ ಪರಿಸ್ಥಿತಿ ಏನು? ನೀವು ಹೊಸದಾಗಿ ಏನೂ ನಮಗೆ ಕೊಟ್ಟಿಲ್ಲ, ಈ 50 ಲಕ್ಷ ರೂಪಾಯಿಗಳನ್ನು, ವಾಸ್ತವಾಗಿ ಕೊಟ್ಟಿರುವಂಥಾದ್ದು ಸಿ.ಎಂ.ಜಿ.ವೈ ಬದಲಾಗಿ ಇದನ್ನು ಕೊಟ್ಟಿದ್ದೀರಿ. ಆದುದರಿಂದ ನಾನು ಕೇಳುವಂಥಾದ್ದು ಏನೆಂದರೆ, ಇದರಿಂದ ಏನೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಈ ಹಣವನ್ನು ಕನಿಷ್ಟ ಒಂದು ಕೋಟಿ ರೂಪಾಯಿಗಳಿಗೆ ಹೆಚ್ಚಿಸಲೇಬೇಕು. ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಕಾರ್ಪೊರೇಟರ್‌ಗಳಿಗೆ ಅಷ್ಟು ಹಣವನ್ನು ಕೊಡುವುದಿಲ್ಲವೇ, ನಮ್ಮ ಶಾಸಕರಿಗೆ ಇವತ್ತು ಈ ಪರಿಸ್ಥಿತಿ ಆದರೆ, ಹೇಗೆ? ಆದುದರಿಂದ ನಾನು ತಮ್ಮ ಮುಖಾಂತರ ಯೋಜನಾ ಮಂತ್ರಿಯವರನ್ನು ಕೇಳುವುದೆನೆಂದರೆ ಈ ಮೊತ್ತವನ್ನು ದಯವಿಟ್ಟು ಒಂದು ಕೋಟಿ ರೂಪಾಯಿಗಳಿಗೆ ಏರಿಸಬೇಕು. ಇಲ್ಲದಿದ್ದರೆ ನಾವು ಯಾವುದೇ ಕೆಲಸವನ್ನು ಶಾಸಕರ ಕ್ಷೇತ್ರದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗ ಗೈಡ್ ಲೈನ್ಸ್ ಕೂಡ ಲೋಕಸಭಾ ಸದಸ್ಯರಿಗೆ ಏನು ಇದೆ, ಅದನ್ನೇ ಮಾಡಬೇಕೆಂದು ಹೇಳಿದ್ದೆವು. ಅದಕ್ಕೆ ಹಿಂದೆ ಒಪ್ಪಿಕೊಂಡಿದ್ದೀರಿ, ಆ ಗೈಡ್‌ಲೈನ್ಸ್ ಚೇಂಜ್ ಆಗಿಲ್ಲ. ದಯವಿಟ್ಟು ಲೋಕಸಭಾ ಸದಸ್ಯರಿಗೆ ಏನು ಗೈಡ್‌ಲೈನ್ಸ್ ಕೊಡುತ್ತಾರೆ, ನಮಗೂ ಕೂಡ ಅದೇ ರೀತಿಯ ಗೈಡ್‌ಲೈನ್ಸ್ ಅನ್ನು ಮಾಡಿಕೊಡಬೇಕೆಂದು, ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಚಂದ್ರ ಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್.ಎಸ್. ಪಾಟೀಲ್‌ರವರು ಹೇಳಿದ ಹಾಗೆ ಅದನ್ನು 15ನೇ ಮಾರ್ಚ್ ತಿಂಗಳಲ್ಲಿ, ಈಗಾಗಲೇ ನಾವು ಸಂಸತ್ ಸದಸ್ಯರ ಪ್ರದೇಶಾಭಿವೃದ್ಧಿ ಯೋಜನೆಗೆ ಅನುಗುಣವಾಗಿ ಕರ್ನಾಟಕ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಅಡಿಯಲ್ಲಿ ತೆಗೆದುಕೊಳ್ಳಬಹುದಾದ ಕಾಮಗಾರಿಗಳ ಬಗ್ಗೆ, ಆ ಮಾರ್ಗಸೂಚಿಯಂತೆ ಮಾಡಿ ಆಗಿದೆ.

ಈ ಸಮಸ್ಯೆ ಬಗೆಹರಿದಿದೆ. ಮಾನ್ಯ ಶ್ರೀರಾಮರೆಡ್ಡಿಯವರು ಕೇಳಿದಂಥ ಪ್ರಶ್ನೆಗೆ ಉತ್ತರಿಸುವುದಾದರೆ, ಹಿಂದೆ ಇದ್ದಂಥ 50 ಲಕ್ಷ ರೂಪಾಯಿಗಳನ್ನು ಪ್ರತಿಯೊಬ್ಬ ಶಾಸಕರಿಗೂ ಕೂಡ ಕ್ಷೇತ್ರಾಭಿವೃದ್ಧಿಗೆ ಕೊಡತಕ್ಕಂಥ ತೀರ್ಮಾನವನ್ನು ಮಾಡಿದ್ದಾರೆ. ಈ ವರ್ಷದ ಆಯವ್ಯಯ ಮಂಡನೆಯಲ್ಲಿ ಪ್ರತಿಯೊಂದು ಕ್ಷೇತ್ರಕ್ಕೆ 50 ಲಕ್ಷ ರೂಪಾಯಿಗಳನ್ನು ಅವರ ಆದೇಶದಂತೆಯೇ ರಸ್ತೆಗಳನ್ನು ಮಾಡುವುದಕ್ಕೋಸ್ಕರವಾಗಿ ಎಂದು ನಿಗದಿ ಮಾಡಿದ್ದಾರೆ. ಅದನ್ನು ತಾವೂ ಕೂಡ ಪ್ರಸ್ತಾಪ ಮಾಡಿದ್ದಿರಿ. ಅದನ್ನು ಒಂದು ಕೋಟಿ ರೂಪಾಯಿಗಳಿಗೆ ಹೆಚ್ಚಿಸಬೇಕೋ ಅಥವಾ ಶಾಸಕರ ನಿಧಿಯನ್ನು ಒಂದು ಕೋಟಿ ರೂಪಾಯಿಗಳಿಗೆ ಹೆಚ್ಚಿಸಬೇಕೋ ಎನ್ನುವುದನ್ನು ತಾವು clarify ಮಾಡಲಿಲ್ಲ. ಶಾಸಕರ ನಿಧಿ ಬಗ್ಗೆ ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆ ಮಾನತಾಡಿದ್ದೇನೆ. ಅವರು ಮಾನತಾಡುವಾಗ "ಈಗಾಗಲೇ 50 ಲಕ್ಷ ರೂಪಾಯಿಗಳನ್ನು ಅವರ ಆದೇಶದಿಂದಲೇ ಖರ್ಚು ಮಾಡತಕ್ಕಂಥ ಒಂದು ತೀರ್ಮಾನವಾಗಿದೆ. ಇದೂ ಕೂಡ ಅವಶ್ಯಕತೆ ಬಂದರೆ ನಾನು ಅದರ ಬಗ್ಗೆ ಚಿಂತನೆ ಮಾಡುತ್ತೇನೆ ' ಎನ್ನುವ ಮಾತನ್ನು ಹೇಳಿದ್ದಾರೆ. ನಾವು Detail ಆಗಿ ಬಜೆಟ್ ಮೇಲೆ ಚರ್ಚೆ ಮಾಡುವ ಸಂದರ್ಭದೊಳಗೆ ನಾನು ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ ಅದಕ್ಕೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವೇ ಎನ್ನುವ ಯೋಚನೆ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ರಸ್ತೆಗಳಿಗೆ ಸರ್ಕಾರದ ಆದೇಶದ ಪ್ರಕಾರ 50 ಲಕ್ಷ ರೂಪಾಯಿಗಳನ್ನು ಏನು ಕೊಟ್ಟಿದ್ದೀರಿ ಅದನ್ನು P.W.D ರಸ್ತೆಗಳಿಗೆಂದು ಕೊಟ್ಟಿದ್ದೀರಿ. Z.P. ರಸ್ತೆಗಳು ಏನಿವೆ, ಅವುಗಳ ಗತಿ ಏನು? Z.P. ರಸ್ತೆಗಳಿಗೆ Z.P. ಯವರು ಒಂದು ರೂಪಾಯಿ ಸಹ ಕೊಡುವುದಿಲ್ಲ. ನಮ್ಮ ಕ್ಷೇತ್ರಗಳಲ್ಲಿ Rural Assembly segment ಗಳಲ್ಲಿ PWD ರಸ್ತೆಗಳಿಗಿಂತ ಹೆಚ್ಚಿರತಕ್ಕಂಥದ್ದು Z.P. ರಸ್ತೆಗಳೇ ಆಗಿವೆ. ಆ Z.P. ರಸ್ತೆಗಳ ಗತಿಯೇನು? Z.P. ಯವರು ಹಣ ಕೊಡುವುದಿಲ್ಲ. ಈ ಹಣವನ್ನು ಅದಕ್ಕೆ ಉಪಯೋಗಿಸುವ ಹಾಗಿಲ್ಲ. ಅದಕ್ಕೂ ಹಣ ಬೇಕು, ಇದಕ್ಕೂ ಹಣ ಬೇಕೆಂದು ನಾವು ಈಗ ಕೇಳುತ್ತಿರುವಂಥದ್ದು. ಶಾಸಕರ ಪ್ರದೇಶಾಭಿವೃದ್ಧಿ ನಿಧಿಗೆ 50 ಲಕ್ಷ ರೂಪಾಯಿಗಳಿಂದ ಒಂದು ಕೋಟಿ ರೂಪಾಯಿಗಳಿಗೆ ಜಾಸ್ತಿ ಮಾಡಿ ಎಂದು ಕೇಳುತ್ತಿದ್ದೇನೆ. ರಸ್ತೆಗಳಿಗೆ ಏನು ಮಾಡಿದ್ದೀರೆಂದರೆ, ಈಗ PWD ರಸ್ತೆ ಎಂದು ಮಾತ್ರ ನೀವು ಬಜೆಟ್‌ನಲ್ಲಿ ಹೇಳಿದ್ದೀರಿ. ನೀವು PWD ಎನ್ನುವುದನ್ನು ತೆಗೆದು ರಸ್ತೆ ಎಂದು ಹೇಳಬೇಕಾಗುತ್ತದೆ ಇಲ್ಲವೆಂದರೆ Z.P. ರಸ್ತೆಗಳ ಗತಿ ಏನೆಂದು ನೀವು ಹೇಳಬೇಕಾಗುತ್ತದೆ. ಅದಕ್ಕೋಸ್ಕರ ನಾವು ಹೇಳುವುದೇನೆಂದರೆ, Rural Areas, villages ನಲ್ಲಿ Z.P. ರಸ್ತೆಗಳೇ ಹೆಚ್ಚು ಇರತಕ್ಕಂಥದ್ದು Normal ಆಗಿ P.W.D. ಆ ರಸ್ತೆಗಳು ಕಡಿಮೆ ಇರುತ್ತವೆ. ಹಾಗಾಗಿ ಇದಕ್ಕೂ ಕೂಡ ಒಂದು ಕೋಟಿ ರೂಪಾಯಿಗಳು ಬೇಕಾಗುತ್ತದೆ ಮತ್ತು ಬಜೆಟ್‌ನಲ್ಲಿ "ರಸ್ತೆ" ಎಂದು ನೀವು ಸೇರಿಸಬೇಕಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ಮಾನ್ಯ ಯಡಿಯೂರಪ್ಪನವರು ಈ ಕಡೆ ಇದ್ದಾಗ ಮಾತೆತ್ತಿದ್ದರೆ ಶಾಸಕರ ನಿಧಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕು, 2 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳುತ್ತಿದ್ದವರು ಆ ಕಡೆಗೆ ಹೋದ ಕೂಡಲೇ ಪೂರ್ತಿ ಬದಲಾಯಿಸಿಬಿಟ್ಟಿದ್ದಾರೆ. ಈಗ ಮಾನ್ಯ

ಶ್ರೀರಾಮರೆಡ್ಡಿಯವರು ಹೇಳಿರುವುದಕ್ಕೆ ಒಂದು ಉದಾಹರಣೆಯನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎರಡು ತಿಂಗಳಿಂದ ಈಚೆಗೆ ಟನ್ ಒಂದು ಟನ್‌ಗೆ 15 ಸಾವಿರ ರೂಪಾಯಿಗಳು ಇದ್ದುದ್ದು ಇವತ್ತು 17,964 ರೂಪಾಯಿಗಳಾಗಿದೆ. ಈಗ P.W.D. ರಸ್ತೆಗಳಿಗೆ package tender ಗಳನ್ನು ಹಾಕಿದವರು ಕೆಲಸ ಮಾಡುವುದಕ್ಕೆ ಯಾರೂ ಮುಂದೆ ಬರುತ್ತಿಲ್ಲ. ಯಾರೂ ಕೆಲಸ ಮಾಡುತ್ತಿಲ್ಲ. ನಾವು ಹಳ್ಳಿಗಳ ಕಡೆಗೆ ಹೋಗಬೇಕು. ರಸ್ತೆ ಕೆಲಸ ಮಾಡಿ, ಏಕೆ ಮಾಡುತ್ತಿಲ್ಲವೆಂದರೆ, tar ಗೆ ಈಗ ಬೆಲೆ ಜಾಸ್ತಿಯಾಗಿದೆ, ನಿಮ್ಮ Chief Engineer ಒಪ್ಪುತ್ತಿಲ್ಲವೆಂದು ಹೇಳುತ್ತಿದ್ದಾರೆ. ಇದು ಇವತ್ತಿನ ಪರಿಸ್ಥಿತಿಯಾಗಿದೆ. ನೀವು ವಾಸ್ತವಾಂಶಗಳನ್ನು ಗಮನಿಸಿ ಇದನ್ನು ಮಾಡದೇ ಇದ್ದರೆ, ನೀವು ಬರೀ "ಮೇಕೆ ಬಾಯಿಗೆ ಬೆಣ್ಣೆ ಹಚ್ಚಿದ ಹಾಗೆ' ಆಗುತ್ತದೆಯೇ ವಿನಃ ಇನ್ನೇನೂ ಆಗುವುದಿಲ್ಲ. ಅದಕ್ಕೋಸ್ಕರ ಶಾಸಕರ ನಿಧಿಯನ್ನು ಹೆಚ್ಚಿಸಬೇಕು, ಈ ರಸ್ತೆಗಳಿಗೆ ಹಾಕುವಂಥ Tar ಬೆಲೆ ಆಗಿಂದಾಗ್ಗೆ ಹೆಚ್ಚಿಗೆ ಆಗುವಂಥದ್ದನ್ನು tar rate ಪ್ರಕಾರ, ಕೊಡುವಂಥ ಕೆಲಸ ಸಹ ಆಗಬೇಕಾಗುತ್ತದೆ. ಇಲ್ಲದಿದ್ದರೆ ಅವರು SR rate ಪ್ರಕಾರ ಕೆಲಸವನ್ನೇ ಮಾಡುವುದಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳೇ, ನನ್ನ ಕ್ಷೇತ್ರದಲ್ಲಿ ಒಬ್ಬರು ಸುಮಾರು 9–10 ಕೋಟಿ ರೂಪಾಯಿಗಳ package tender ಹಾಕಿದ್ದಾರೆ. ಕೆಲಸ ಮಾಡಿ ಎಂದು ಹೇಳಿದರೆ, "ಸರ್, tar rate ಜಾಸ್ತಿಯಾಗಿದೆ, ಹಾಗಾಗಿ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಏನಪ್ಪಾ, tender ಹಾಕುವಾಗ ಇದು ನಿನ್ನದೇ ಜವಾಬ್ದಾರಿ, ನಮಗೆ ಏಕೆ ಹೇಳುತ್ತೀರಿ ಎಂದು ಕೇಳಿದರೆ, tender ನಂತರ tar rate ಜಾಸ್ತಿಯಾಗಿರುವುದರಿಂದ ನಾವು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಈ ಪರಿಸ್ಥಿತಿ ಇಡೀ ರಾಜ್ಯದಲ್ಲಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಬಹಳ ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಶ್ರೀನಿವಾಸಗೌಡರು ಸಹ ಅದರ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ನೀವು ಒಂದು ಒಳ್ಳೆಯ ಮಾತನ್ನು ಹೇಳಬೇಕಲ್ಲವೇ? 50 ಲಕ್ಷ ರೂಪಾಯಿಗಳನ್ನು ಶಾಸಕರಿಗೆ ಆ ಒಂದು ನಿಧಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಹಿಂದೆ ನೀವು ಮಾಡಿದ್ದಿರಿ. ಆ ಗೌರವ ಹಿಂದಿನ ಸರ್ಕಾರಕ್ಕೆ ಸಲ್ಲಬೇಕು. ಈ ಸಲ ನಮ್ಮ ಶಾಸಕರು ಆ ಕ್ಷೇತ್ರದಲ್ಲಿ ತಮಗೆ ಬೇಕಾದ ಕೆಲಸಕಾರ್ಯಗಳನ್ನು ಮಾಡಬೇಕು, ಗೌರವದಿಂದ ಓಡಾಡುವುದಕ್ಕೆ ಬೇಕಾದ ವಾತಾವರಣ ಸಿಗಬೇಕೆನ್ನುವ ದೃಷ್ಟಿಯಿಂದಲೇ ಇನ್ನೂ 50 ಲಕ್ಷ ರೂಪಾಯಿಗಳನ್ನು P.W.D. ರಸ್ತೆಗಳಿಗೆಂದು ಕೊಟ್ಟಿದ್ದೇವೆ. ಅಂದರೆ ಆ ಶಾಸಕ ತನ್ನ ಕ್ಷೇತ್ರದಲ್ಲಿ ಓಡಾಡಬೇಕಾದರೆ ಆದ್ಯತೆ ಮೇಲೆ ತಾನು ಸ್ವತಂತ್ರವಾಗಿ ಕೆಲಸ ಮಾಡಲಿಕ್ಕೆ ಅನುಕೂಲವಾಗಲಿ ಎಂದು 50 ಲಕ್ಷ ರೂಪಾಯಿಗಳನ್ನು ನಾನು ಈ ಬಜೆಟ್‌ನಲ್ಲಿ ಅಂದರೆ 2006–07ರಲ್ಲಿ ತೆಗೆದಿಟ್ಟಿದ್ದೇನೆ. ಉಳಿದಂಥ ವಿವರಗಳನ್ನು ನಾಳೆ ಹೇಗೂ ನಾನು ಉತ್ತರ ಕೊಡುತ್ತೇನೆ, ಆ ಸಮಯದಲ್ಲಿ ನಿಮ್ಮೆಲ್ಲರ ಭಾವನೆಗಳನ್ನು ಅರ್ಥ ಮಾಡಿಕೊಂಡು ಸಮಂಜಸವಾದ ಉತ್ತರವನ್ನು ನಾಳೆ ನಾನು ಕೊಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ: ಕಳೆದ ವರ್ಷ road ಕೆಲಸಕ್ಕೆಂದು 40 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು.

ಅಧ್ಯಕ್ಷರು: ಮಾನ್ಯ ರಾಯರೆಡ್ಡಿಯವರೆ, ಅವರು ಉತ್ತರ ಕೊಡುವಾಗ ಇದನ್ನೆಲ್ಲಾ ಗಮನಿಸಿದ್ದೇನೆ. ನಾನು ಸೂಕ್ತವಾದ ಉತ್ತರ ಕೊಡುತ್ತೇನೆಂದು ಹೇಳುತ್ತಿದ್ದಾರೆ. ಮತ್ತೆ ಮತ್ತೆ ಏಕೆ ಕೇಳುತ್ತಿದ್ದೀರಿ?

ರಾಜ್ಯದಲ್ಲಿ ಗಂಧದ ಮರಗಳನ್ನು ಬೆಳೆಸಲು ಪ್ರೋತ್ಸಾಹಿಸುವುದು

65(373) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಶ್ರೀಗಂಧ ಹಾಗೂ ಶ್ರೀಗಂಧದ ಎಣ್ಣೆಯ ಕೊರತೆ ಕಂಡುಬಂದಿದೆಯೇ?

ಆ) ಹಾಗಿದ್ದಲಿ ಶ್ರೀಗಂಧದ ಎಣ್ಣೆಯನ್ನು ರಾಜ್ಯವು ಆಮದು ಮಾಡಿಕೊಳ್ಳುತ್ತಿದೆಯೇ?

ಇ) ಈ ಕೊರತೆಯನ್ನು ನೀಗಿಸಲು ಸರ್ಕಾರವು ತೆಗೆದುಕೊಳ್ಳುತ್ತಿರುವ ಕ್ರಮಗಳಾವುವು;

ಈ) ಖಾಸಗೀ ಭೂಮಾಲೀಕರಿಗೆ ಶ್ರೀಗಂದ ತೇಗ ಮತ್ತು ಬೀಟೆ ಮರಗಳನ್ನು ಅವರ ಜಮೀನನಲ್ಲಿ ನೆಟ್ಟು ಪೋಷಿಸಲು ಅವಕಾಶವಿದೆಯೇ?

ಉ) ಹಾಗಿದ್ದಲ್ಲಿ ಶ್ರೀಗಂಧ, ತೇಗ ಮತ್ತು ಬೀಟೆ ಮರಗಳನ್ನು ಅವರ ಜಮೀನುಗಳಲ್ಲಿ ಬೆಳೆದ ಸಾರ್ವಜನಿಕರಿಗೆ ಯಾವುದಾದರೂ ರಿಯಾಯಿತಿಯನ್ನು ಸರ್ಕಾರವು ನೀಡುತ್ತಿದೆಯೇ?

ಊ) ಹಾಗಿದ್ದಲ್ಲಿ ಈ ಬಗ್ಗೆ ಇರುವ ನಿಯಮಗಳೇನು?

ಶ್ರೀ ಐವಾನ್ ನಿಗ್ಲಿ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು.

ಆ) ಇಲ್ಲ.

ಇ) ಸರ್ಕಾರವು 2001ನೇ ಸಾಲಿನಲ್ಲಿ ಶ್ರೀಗಂಧ ಮರಗಳನ್ನು ಬೆಳೆದ ಖಾಸಗಿ ಜಮೀನಿನ ಮಾಲೀಕರು ಮತ್ತು ಅನುಭೋಗಸ್ಥರಿಗೆ ಶ್ರೀಗಂಧದ ಮಾಲೀಕತ್ವವನ್ನು ನೀಡಿದೆ. ಇಂತಹ ಮರಗಳ ಮಾಲೀಕರು ಶ್ರೀಗಂಧದ ಮರವನ್ನು ಅರಣ್ಯ ಇಲಾಖೆ ಅಥವಾ ಸರ್ಕಾರದ ಇನ್ನಿತರ ಸಂಸ್ಥೆಗಳಾದ KSDL (Karnataka Soaps and Detergents Ltd.), KSHDC (Karnataka State Handicrafts Development Corporation Ltd.), KSFIC (Karnataka State Forest Industries Corporation Ltd.) ಮುಂತಾದವರಿಗೆ ಮಾರಾಟ ಮಾಡಬಹುದು. ಸರ್ಕಾರವು ಖಾಸಗೀ ಮಾಲೀಕತ್ವದ ಶ್ರೀಗಂಧ ಮರಗಳ ಸಂಪೂರ್ಣ ಮೌಲ್ಯವನ್ನು ಅದರ ಪರಿವರ್ತನಾ ವೆಚ್ಚವನ್ನು ಕಳೆದು ಮಾಲೀಕರಿಗೆ ನೀಡುತ್ತಿದೆ. ಹೀಗೆ ಖಾಸಗಿ ಭೂಮಾಲೀಕರಿಗೆ ಶ್ರೀಗಂಧ ಮರಗಳನ್ನು ಬೆಳೆಸಲು ಸರ್ಕಾರವು ಉತ್ತೇಜನ ನೀಡುತ್ತಿದೆ. ಅಲ್ಲದೇ ಸರ್ಕಾರವು ಅರಣ್ಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಶ್ರೀಗಂಧವನ್ನು ಬೆಳೆಸಲು ಕ್ರಮಕೈಗೊಳ್ಳುತ್ತಿದೆ.

ಈ) ಇದೆ.

ಉ) ಇಲ್ಲ.

ಊ) ಅನ್ವಯಿಸುವುದಿಲ್ಲ.